ಸಂತ ಕವಿ ಕನಕದಾಸರ

# ನಳದಮಯಂತಿ

ಪ್ರೇಮ ಕತೆ



ಡಾ.ಜಿ. ಕೃಷ್ಣಪ್ಪ

## ಬಾಹುಕನ ಕಣ್ಣ ಕದಿರಿನಲ್ಲಿ ನಳನೃಪನ ತೇಜ ಕಂಡ ದಮಯಂತಿ

ಕೈಯಲ್ಲಿ ಕಡಿವಾಣವನ್ನು ಹಿಡಿದು, ರಾಜನಿಗೆ ಎಚ್ಚರಿಸಿ ಕುದುರೆಗಳಿಗೆ ಹೂಂಕರಿಸಿದನು. ಅವು ಮುಂದಕ್ಕೆ ದೃಷ್ಟಿ ಹರಿಸಿ ಲವಲವಿಕೆಯಿಂದ ವೇಗದಲ್ಲಿ ಓಡಿದವು. ಅವುಗಳ ಆವೇಗದ ರಭಸವನ್ನು ಏನೆಂದು ಹೇಳುವುದು? ನೆರೆದ ಜನ ಅಲ್ಲಲ್ಲಿ ನಿಂತು ಬೆಕ್ಕಸ ಬೆರಗಾಗಿ ನೋಡಿದರು.

ಕುದುರೆಯ ಹೇಷಾರವ, ರಥದ ಚಕ್ರಗಳು ಹೊರಳುವ ಚೀತ್ಕಾರ, ಸಾರಥಿಯ ಸಂಭ್ರಮಾವೇಶ, ರಥದ ಅಚ್ಚುಗಳ ಝೇಂಕಾರ ನಾದದಲ್ಲಿ ಭರಿದಿ ಕೆಂದೂಳು ಹೊಮ್ಮಿಸುತ, ಋತುಪರ್ಣ ರಾಜನು ಬಂದನು. ಅದನ್ನು ವಿದರ್ಭ ನಗರದ ಜನರು ಗುಂಪುಹೂಡಿ ಕುತೂಹಲದಿಂದ ನೋಡಿದರು. ಆ ವಿಷಯವನ್ನು ಪರಿಚಾರಕರು ಭೀಮನೃಪನಿಗೆ ತಿಳಿಸಿದರು.

